**ಇಂಡಿಯನ್ ಎನ್ಸೆಂಬಲ್**

**ಇಂಡಿಯನ್ ಎನ್ಸೆಂಬಲ್ ವತಿಯಿಂದ ಆಲೋಚನಾ ಅಭಿವೃದ್ಧಿ ಲ್ಯಾಬ್**

*** ಏನು ಇದರ ಉದ್ದೇಶ?**

ಅನುಭವಿ ಮತ್ತು ಯುವ ರಂಗಕರ್ಮಿಗಳಲ್ಲಿರುವ ಸೃಜನಾತ್ಮಕ ಆಲೋಚನೆಗಳನ್ನು ಬೆಳೆಸಲು ಬೇಕಾದಂತಹ ಅಭ್ಯಾಸ ಮತ್ತು ಅನ್ವೇಷಣೆಗಳನ್ನು ಪೂರಕಗೊಳಿಸಲು ಒಂದು ಉತ್ತಮ ವೇದಿಕೆ.

*** ಯಾರು ಯಾರು ಇದರ ಲಾಭ ಪಡೆಯಬಹುದು?**

ನಿರ್ದೇಶನ, ನಾಟಕ ರಚನೆ, ಅಭಿನಯ - ಈ ಮೇಲಿನ ವಿಷಯಗಳ ಬಗ್ಗೆ ಆಸಕ್ತಿ ಇರುವವರಿಗೆ ತಮ್ಮ ಸೃಜನಶೀಲತೆಯ ಮುಖಾಂತರ ಬೆಳೆಸಲು ಇದು ಒಂದು ಉತ್ತಮ ಅವಕಾಶ.

--ಈಗಾಗಲೇ ರಚನೆಗೊಂಡಿರುವ ನಾಟಕಗಳಿದ್ದು, ಅದರಲ್ಲಿ ಕೆಲವೊಂದು ಬದಲಾವಣೆ ಬೇಕಾಗಿದ್ದರೆ , ಅದಕ್ಕೆ ಹೊಸ ಆಯಾಮವನ್ನು ಕೊಡುವದಕ್ಕೆ ಬೇಕಾಗುವ ಎಲ್ಲ ಅಭ್ಯಾಸದ ಸೌಲಭ್ಯಗಳನ್ನು ಇಲ್ಲಿ ಪಡೆದುಕೊಳ್ಳಬಹುದು.

--ನಿಮ್ಮ ಆಲೋಚನೆಯಲ್ಲಿ ಒಂದು ವಿಷಯ ಇರಬಹುದು (ಸಾಮಾಜಿಕ ಅಥವಾ ರಾಜಕೀಯ). ನಾಟಕದ ಒಂದು ದೃಶ್ಯ ಬರೆದು ನಂತರ ಏನೂ ಹೊಳೆಯದೆ ನಿಂತಿರಬಹುದು. ಪ್ರದರ್ಶನದ ಒಂದು ತುಂಡು ಆಲೋಚನೆಯಲ್ಲಿ ಇರಬಹುದು. ಆ ಆಲೋಚನೆಗಳನ್ನು ಆಭಿವೃದ್ಧಿ ಪಡಿಸಿ ಅದಕ್ಕೆ ಪೂರ್ಣರೂಪ ಕೊಡಲು ಮಾಡಬೇಕಾದ ತಯಾರಿಯನ್ನು ಪಡೆದುಕೊಳ್ಳಬಹುದು.

--ಒಂದು ಹೊಸ ವಿಷಯದ ಆಲೋಚನೆಯನ್ನು ಹೊತ್ತು ಬಂದಂತಹ ತಂಡ ನಂತರ ಆ ಆಲೊಚನೆಯನ್ನು ಬೆಳೆಸುವದರಲ್ಲಿ ಗೊಂದಲದಲ್ಲಿದ್ದರೆ ಆ ಆಲೋಚನೆಯನ್ನು ಬೆಳೆಸಲು ಪೂರಕವಾದ ವಾತಾವರಣವನ್ನು ನಿರ್ಮಿಸಲಾಗುವುದು.
(ಒಂದು ಗುಂಪಿನಿಂದ ಗರಿಷ್ಠ ಇಬ್ಬರು ಆಸಕ್ತರು ಮಾತ್ರ ಅರ್ಜಿ ಸಲ್ಲಿಸಬಹುದು )

***ಈ ಲ್ಯಾಬಿನಿಂದ ಏನನ್ನು ನಿರೀಕ್ಷಿಸಬಹುದು?**

--ಬೇರೆಬೇರೆ ಉಪನ್ಯಾಸಗಳು, ಪ್ರಸ್ತುತಿ, ಗುಂಪುಚರ್ಚೆ, ಓದುವುದು, ಪ್ರಾಯೋಗಿಕ ನಿಯೋಜನೆಗಳು

--ಗುಂಪಿನಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯ ಆಲೋಚನೆಗಳನ್ನು ಬೆಳೆಸುವುದರ ಬಗ್ಗೆ ಸಂಪೂರ್ಣವಾಗಿ ಗಮನ ಹರಿಸಲಾಗುವುದು

--ನಿಮ್ಮ ಆಲೋಚನೆಗೆ ಅನುಗುಣವಾಗಿ ನಾಟಕ ನಿರ್ಮಾಣವಾಗುವುದಕ್ಕೆ ಬೇಕಾದ ತಯಾರಿಗಳ ಬಗ್ಗೆ ಸಹಾಯ ಮಾಡಲಾಗುವುದು

--ನೀವು ಆಲೋಚಿಸಿದ ವಿಷಯದ ಬಗ್ಗೆ ಪರಿಶೋಧನೆ ಮಾಡಲು ಸರಿಹೊಂದುವ ಮಾರ್ಗದರ್ಶನ ನೀಡಲಾಗುವುದು

***ಏನಿದರ ಅವಧಿ?**

--ಲ್ಯಾಬ್ ಬೆಂಗಳೂರಿನಲ್ಲಿಯೇ ಆಯೋಜಿಸಲಾಗುವುದು. ವಾರಕ್ಕೆ ಮೂರು ಅಧಿವೇಶನಗಳನ್ನು ಏರ್ಪಡಿಸಲಾಗುವುದು.
(ಪ್ರತಿ ಅಧಿವೇಶನ ೩ ರಿಂದ ೪ ಗಂಟೆಯ ಅವಧಿಯ ವರೆಗೆ ಇರುವುದು)

--ಈ ಕೋರ್ಸ್ ಅಂತಿಮ ಪ್ರಸ್ತುತಿಯನ್ನು ಒಳಗೊಂಡು, ಮೇ ಇಂದ ಅಕ್ಟೋಬರ್ ೨೦೧೯ ರ ಒಳಗೆ ಕೊನೆಗೊಳ್ಳುತ್ತದೆ.

--ಜೂಲೈ ಅಥವಾ ಆಗಸ್ಟ್ ನಲ್ಲಿ ವಿರಾಮ ನೀಡಲಾಗುವುದು (ಪ್ರಕ್ರಿಯೆಗೆ ಅನುಗುಣವಾಗಿ).
ಅರ್ಜಿ ಸಲ್ಲಿಸಿದ ತರುವಾಯ ೭ ತಿಂಗಳ ಲಭ್ಯತೆಯನ್ನು ಖಚಿತ ಪಡಿಸಬೇಕು.

--ಈ ಪ್ರಕ್ರಿಯೆಗೆ ಅನುಗುಣವಾಗಿ ಕೋರ್ಸಿನ ಸಮಯಾವಧಿಯನ್ನು ಬದಲಾಯಿಸಬಹುದು. ಈ ಬದಲಾವಣೆಗೆ ನಿಮ್ಮ ಬಧ್ಧತೆ ಮುಖ್ಯವಾಗಿದೆ.

***ಅರ್ಜಿ ಸಲ್ಲಿಕೆ ಹೇಗೆ?**

--ನಿಮ್ಮ ಪ್ರವೇಶ ಅರ್ಜಿಯನ್ನು ಗೂಗಲ್ ನಲ್ಲಿ ಪಡೆಯಬಹುದು.

--ಒಮ್ಮೆ ನಿಮ್ಮ ಅರ್ಜಿ ಸ್ವೀಕರಿಸಿದ ಮೇಲೆ ಈ-ಮೇಲ್ ಮುಖಾಂತರ ಕೆಲವು ವಿಷಯಗಳ ಸ್ಪಷ್ಟೀಕರಣ ನಮಗೆ ಬೇಕಾಗಬಹುದು.

--ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಫೆಬ್ರವರಿ ೧೫ ೨೦೧೯. ಸ್ವೀಕರಿಸಿದ ಅರ್ಜಿಗಳ ಬಗ್ಗೆ ಫೆಬ್ರವರಿ ೨೨ ರಂದು ತಿಳಿಸಲಾಗುವುದು.

--ಅರ್ಜಿ ಸ್ವೀಕರಿಸಿದ ಅಭ್ಯರ್ಥಿಗಳನ್ನು ಫೆಬ್ರವರಿ ೨೨ ರಿಂದ ೨೮ ರ ಒಳಗೆ ಭೇಟಿ ಮಾಡಿ ಖಚಿತಪಡಿಸಲಾಗುವುದು.

--ಲ್ಯಾಬ್ ನ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುವುದರ ಬಗ್ಗೆ ಸಂವಾದ ನಡೆಸುವುದೇ ಈ ಭೇಟಿಯ ಉದ್ದೇಶ.
ಸಂವಾದ ಬೆಂಗಳೂರಿನಲ್ಲಿಯೇ ಇರುತ್ತದೆ. ಒಂದು ವೇಳೆ ಬೆಂಗಳೂರಿನಿಂದ ಹೊರಗಿನವರಾಗಿದ್ದರೆ skype ಮುಖಾಂತರ ಸಂವಾದ ನಡೆಸಲಾಗುವುದು.

--ಯಾವುದೇ ಪ್ರಶ್ನೆ ಇದ್ದರೆ(indianensemble@gmail.com)ಗೆ ಬರೆಯಬಹುದು

**ಇಂಡಿಯನ್ ಎನ್ಸೇಂಬಲ್ ಐಡಿಯಾಸ್ (ಆಲೋಚನೆ) ಲ್ಯಾಬ್**

**ಅವಧಿ** - ಮೇ ಇಂದ ಅಕ್ಟೋಬರ್ ೨೦೧೯

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಫೆಬ್ರವರಿ ೧೫ ೨೦೧೯

***ಅಭ್ಯರ್ಥಿಯ ಹೆಸರು ಅಥವಾ ತಂಡದ ಹೆಸರು** : ______________________

***ಮೊಬೈಲ್ ಸಂಖ್ಯೆ** :____________________

***ಈ-ಮೇಲ್ :**_____________________

***ಈಗಿನ ವಿಳಾಸ ಅಥವಾ ತಂಡದ ವಿಳಾಸ :**____________________________________________________________
____________________________________________________________

ದಯವಿಟ್ಟು ನಿಮ್ಮ ರಂಗಭೂಮಿಯ ಅನುಭವ ಅಥವಾ ನೀವು ಯಾವುದಾದರೂ ತಂಡದಲ್ಲಿ ಗುರುತಿಸಿಕೊಂಡಿದ್ದರೆ
ಆ ತಂಡದ ವಿವರಗಳನ್ನು ತಿಳಿಸಿ :______________________________

**ಈ ಲ್ಯಾಬ್ ಸೇರಿಕೊಳ್ಳಲು ಕಾರಣ?:**

______________________________

______________________________

**(೧೫೦ ಪದಗಳಲ್ಲಿ)**

**ಈ ಲ್ಯಾಬ್‌ನಲ್ಲಿ ನೀವು ಕೆಲಸ ಮಾಡುವ ಆಲೋಚನೆ ಅಥವಾ ವಿಷಯದ ಬಗ್ಗೆ ಚಿಕ್ಕ ವಿವರಣೆ ನೀಡಿ:**______________________________

______________________________

ನೀವು ಆರಿಸಿಕೊಂಡ ವಿಷಯದಲ್ಲಿ ಎದರಿಸುತ್ತಿರುವ ಸವಾಲುಗಳ ಬಗ್ಗೆ ಮತ್ತು ಆ ಸವಾಲುಗಳಲ್ಲಿನ ಪರಿಹಾರವನ್ನು
ಕಂಡುಕೊಳ್ಳಲು ಲ್ಯಾಬ್ ನಿಮಗೆ ಹೇಗೆ ಸಹಕರಿಸಬಹುದು?:______________________________

______________________________

**(೧೫೦ ಪದಗಳಲ್ಲಿ)**

ನೀವು ಎದುರಿಸುತ್ತಿರುವ ಸವಾಲುಗಳನ್ನು ಬಗೆಹರಿಸಲು ನಿಮಗೆ ಬೇಕಾದ ಸಲಹೆ, ಸಹಕಾರ ಅಥವಾ
ಸಹಾಯದ ಬಗ್ಗೆ ತಿಳಿಸಿ:______________________________

______________________________

ಲ್ಯಾಬ್ ನಲ್ಲಿ ನಿಮ್ಮನ್ನು ನೀವು ತೊಡಗಿಸಲಿಕೊಂಡ ನಂತರ ಬೇರೆ ಅಭ್ಯರ್ಥಿಗಳು ನಿಮ್ಮಿಂದ ಯಾವ
ರೀತಿಯ ಸಹಾಯವನ್ನು ನಿರೀಕ್ಷಿಸ ಬಹುದು? (ಅಭಿನಯ, ಬರೆಯಲು ಸಹಾಯ)

***ಇನ್ನೇನಾದರೂ ಕೇಳಬೇಕಾದರೆ:**______________________________